ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತಮೂರನೆಯ ಅಧಿವೇಶನ

ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

ಖುಲಾಸೆ ಪ್ರಕರಣಗಳಲ್ಲಿ ಆಗುತ್ತಿರುವ ನಿರ್ಲಕ್ಷ್ಯತೆ ಬಗ್ಗೆ

ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

390 (405) ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2015 ರಿಂದ ಇಲ್ಲಿಯವರೆಗೆ ಖುಲಾಸೆಯಾಗಿರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ನಗರಗಳವಾರು ವಿವರ ನೀಡುವುದು)

(ಆ) ಇವುಗಳಲ್ಲಿ, ತನಿಖಾಧಿಕಾರಿಗಳ ನ್ಯೂನತೆ ಮತ್ತು ಅಭಿಯೋಜಕರ ನಿರ್ಲಕ್ಷ್ಯತೆಯಿಂದ ಖುಲಾಸೆಯಾದ ಪ್ರಕರಣಗಳು ಇವೆಯೇ; (ಅವುಗಳ ವಿವರಗಳನ್ನು ನೀಡುವುದು)

(ಇ) ತನಿಖಾಧಿಕಾರಿಗಳ ನ್ಯೂನತೆ ಮತ್ತು ಅಭಿಯೋಜಕರ ನಿರ್ಲಕ್ಷ್ಯತೆಯಿಂದ ಖುಲಾಸೆಯಾಗಿದ್ದಲ್ಲಿ ಅಂತಹ ತನಿಖಾಧಿಕಾರಿ ಮತ್ತು ಅಭಿಯೋಜಕರುಗಳ ಮೇಲೆ ತೆಗೆದುಕೊಂಡ ಶಿಸ್ತಿನ ಕ್ರಮಗಳೇನು? (ವಿವರಗಳನ್ನು ಒದಗಿಸುವುದು)